# ಕೈಮಗ್ಗ ಮತ್ತು ಜವಳಿ ಇಲಾಖೆ

## 2014–15 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನಾ ಕಾರ್ಯಕ್ರಮಗಳ ಸಂಕ್ಷಿಪ್ತ ಮಾಹಿತಿ

### I. ಕೇಂದ್ರ ವಲಯ / ಕೇಂದ್ರ ಪುರಸ್ಕೃತ ಯೋಜನೆಗಳು :

#### 1) ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಯೋಜನೆ (ಸಿಎಚ್‌ಡಿಎಸ್):

ಕ್ಲಸ್ಟರ್ ಅಪ್ರೋಚ್ ಯೋಜನೆಯಡಿ 200 ರಿಂದ 500 ಕೈಮಗ್ಗಗಳ ಸಾಂದ್ರತೆಯಿರುವ ಕೈಮಗ್ಗ ಕ್ಲಸ್ಟರ್‌ಗಳನ್ನು ಗುರುತಿಸಿ ಈ ಕ್ಲಸ್ಟರ್‌ಗಳಲ್ಲಿ ತರಬೇತಿ, ಮಗ್ಗ ಮತ್ತು ಸಲಕರಣೆ ವಿತರಣೆ, ಸಾಮಾನ್ಯ ಸೌಲಭ್ಯ ಕೇಂದ್ರ, ಕಾರ್ಯಾಗಾರ ಮುಂತಾದ ಸೌಕರ್ಯಗಳನ್ನು ಒದಗಿಸಲು ಗರಿಷ್ಠ ರೂ.60.00 ಲಕ್ಷಗಳ ಯೋಜನಾ ವೆಚ್ಚದಲ್ಲಿ ಕೈಮಗ್ಗ ಕ್ಲಸ್ಟರ್‌ಗಳನ್ನು ಅಭಿವೃದ್ಧಿ ಪಡಿಸುವುದು.

ಗ್ರೂಪ್ ಅಪ್ರೋಚ್ ಯೋಜನೆಯಡಿ 10 ರಿಂದ 50 ಕೈಮಗ್ಗಗಳ ಸಾಂದ್ರತೆಯಿರುವ ಕೈಮಗ್ಗ ಗುಂಪುಗಳನ್ನು ಗುರುತಿಸಿ ಈ ಗುಂಪುಗಳ ಅಭಿವೃದ್ಧಿಗೆ ತರಬೇತಿ, ಮಗ್ಗ ಮತ್ತು ಸಲಕರಣೆ ವಿತರಣೆ, ಕಾರ್ಯಾಗಾರ ಮುಂತಾದ ಸೌಕರ್ಯಗಳನ್ನು ಒದಗಿಸಲಾಗುವುದು.

#### 2) ಕೈಮಗ್ಗ ನೇಕಾರರ ಮಿತವ್ಯಯನಿಧಿ ಯೋಜನೆ :

ಈ ಯೋಜನೆಯು ನೇಕಾರರು ಉಳಿತಾಯ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಲು ಪ್ರೋತ್ಸಾಹದಾಯಕವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ನೇಕಾರರ ದುಡಿಮೆಯಿಂದ ಶೇಕಡ 8 ರಷ್ಟನ್ನು ಕಟಾಯಿಸಿ ರಾಜ್ಯ ಸರ್ಕಾರದಿಂದ ಶೇಕಡ 8ರಷ್ಟು ಸಮ ಚಂದಾವನ್ನು ಸೇರಿಸಿ ಸಂಬಂಧಪಟ್ಟ ತಾಲ್ಲೂಕು ಖಜಾನೆಯ ನೇಕಾರರ ಖಾತೆಗೆ ಜಮಾ ಮಾಡಲಾಗುವುದು. ಜಮೆಯಾದ ಮೊತ್ತಕ್ಕೆ ರಾಜ್ಯ ಸರ್ಕಾರದ ವತಿಯಿಂದ ವಾರ್ಷಿಕ ಶೇಕಡ 12 ರಷ್ಟು ಬಡ್ಡಿ ನೀಡಲಾಗುವುದು ಈ ಯೋಜನೆಯಡಿಯಲ್ಲಿ ಅಳವಡಿಕೆಯಾದ ಫಲಾನುಭವಿ ಮದುವೆ, ಮನೆ ಕಟ್ಟಡ, ವೈದ್ಯಕೀಯ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮುಂಗಡವನ್ನು ಪಡೆಯಬಹುದಾಗಿದೆ. ಈ ಯೋಜನೆಯಲ್ಲಿ ಅಳವಡಿಸಲಾದ ಫಲಾನುಭವಿಗಳು 15 ವರ್ಷಗಳ ನಂತರ ಅಥವಾ ನೇಕಾರರ ವೃತ್ತಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಅಥವಾ ಅವನಿಗೆ 60 ವರ್ಷ ತುಂಬಿದ ನಂತರ ಪಾವತಿಯಾದ ಪೂರ್ತಿ ಹಣವನ್ನು ಬಡ್ಡಿ ಸಮೇತ ಹಿಂದಿರುಗಿಸಲಾಗುವುದು.

#### 3) ಗುಂಪು ವಿಮಾ ಯೋಜನೆ (ಮಹಾತ್ಮಗಾಂಧಿ ಬುನ್ಕರ್ ಬಿಮಾ ಯೋಜನೆ) :

ಈ ಯೋಜನೆಯಡಿ ಕೈಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಇದನ್ನು ಭಾರತೀಯ ಜೀವವಿಮಾ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಎಲ್ಲಾ ಕೈಮಗ್ಗ ನೇಕಾರರು (ಕೆ.ಹೆಚ್.ಡಿ.ಸಿ., ಸಹಕಾರ ಸಂಘಗಳು ಹಾಗೂ ಖಾಸಗಿ ವಲಯದ) ಈ ಯೋಜನೆಯಡಿ 18 ರಿಂದ 60 ವರ್ಷದೊಳಗಿನ ಎಲ್ಲ ಅರ್ಹ ಪುರುಷ ಮತ್ತು ಮಹಿಳಾ ನೇಕಾರರನ್ನು ನೊಂದಾಯಿಸಲಾಗುವುದು.

**ವಂತಿಗೆ ವಿವರ:**

| ವಾರ್ಷಿಕ ವಂತಿಗೆ (ರೂ.ಗಳಲ್ಲಿ) | | | | |
|---|---|---|---|---|
| **ಫಲಾನುಭವಿ** | **ರಾಜ್ಯ ಸರ್ಕಾರ** | **ಕೇಂದ್ರ ಸರ್ಕಾರ** | **ಎಲ್.ಐ.ಸಿ.** | **ಒಟ್ಟು** |
| 40 | 40 | 150 | 100 | 330 |

**ಪ್ರಯೋಜನಗಳು (1–10–2007 ರಿಂದ):**

| ಸ್ವಾಭಾವಿಕ ಸಾವು | ಅಪಘಾತದಿಂದ ಸಾವು | ಖಾಯಂ ಅಂಗವಿಕಲತೆ | ಭಾಗಶಃ ಅಂಗವಿಕಲತೆ |
|---|---|---|---|
| 60,000 | 1,50,000 | 1,50,000 | 75,000 |

ಇದಲ್ಲದೆ ಶಿಕ್ಷಾ ಸಹಯೋಗ ಯೋಜನೆಯಡಿ ಸದಸ್ಯ ಕೈಮಗ್ಗ ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.

ಹೆಚ್ಚು ಕೈಮಗ್ಗ ನೇಕಾರರು ಸದರಿ ಯೋಜನೆಯ ಪ್ರಯೋಜನ ಪಡೆಯಲು ಉತ್ತೇಜಿಸುವ ಸಲುವಾಗಿ ವಾರ್ಷಿಕ ವಂತಿಗೆಯ 50% ರಷ್ಟು ಅಂದರೆ ರೂ.40/– ಗಳನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುವುದು.

### 4) ಆರೋಗ್ಯ ವಿಮೆ ಯೋಜನೆ :

ಈ ಯೋಜನೆಯಡಿ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯ ಮಾದರಿಯಲ್ಲಿ ಕೈಮಗ್ಗ ನೇಕಾರರಿಗೆ ಆರೋಗ್ಯ ವಿಮಾ ಯೋಜನೆಯನ್ನು ವಿಮಾ ಕಂಪೆನಿಗಳ ಸಹಭಾಗಿತ್ವದೊಂದಿಗೆ ಜಾರಿಗೆ ತರಲಾಗುವುದು. ಸದರಿ ಯೋಜನೆಯಡಿ ಸದಸ್ಯ ಕೈಮಗ್ಗ ನೇಕಾರ, ಪತ್ನಿ / ಪತಿ ಮತ್ತು ಇಬ್ಬರು ಮದುವೆಯಾಗದ ಮಕ್ಕಳು ಉತ್ತಮ ಆರೋಗ್ಯ ತಪಾಸಣೆಗೆ ಪಾವತಿರಹಿತ ಪ್ರಯೋಜನವನ್ನು ಪಡೆಯಬಹುದಾಗಿದೆ. ವಾರ್ಷಿಕ ಮಿತಿ ಪ್ರತಿ ಕುಟುಂಬಕ್ಕೆ (1+3) ರೂ.30,000/–.

**ವಂತಿಗೆ ವಿವರ:**

| ವಾರ್ಷಿಕ ವಂತಿಗೆ (ರೂ.ಗಳಲ್ಲಿ) | | | |
|---|---|---|---|
| **ಫಲಾನುಭವಿಗಳಿಂದ ನೊಂದಣಿ/ ನವೀಕರಣ ಶುಲ್ಕ** | **ರಾಜ್ಯ ಸರ್ಕಾರ** | **ಕೇಂದ್ರ ಸರ್ಕಾರ** | **ಒಟ್ಟು** |
| 30.00 | 190.00 | 560.00 | 750.00 |

ಸದರಿ ಯೋಜನೆಯ ಅನುಷ್ಠಾನದ ರೂಪುರೇಷೆಗಳು ಇನ್ನು ನಿರ್ಧಾರವಾಗಬೇಕಾಗಿರುತ್ತದೆ.

## II. ರಾಜ್ಯ ವಲಯ ಯೋಜನೆಗಳು:

### 5) ದುರ್ಬಲ ವರ್ಗದವರಿಗೆ ಸೀರೆ, ಪಂಚೆ ವಿತರಣೆ :

ಈ ಯೋಜನೆಯಡಿ ರಾಜ್ಯ ಸರ್ಕಾರವು ಈ ಯೋಜನೆಯನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ಜಾರಿಗೆ ತಂದಿರುತ್ತದೆ.

1) ರಾಜ್ಯದ ಕೈಮಗ್ಗ ನೇಕಾರರಿಗೆ ನಿರಂತರ ಉದ್ಯೋಗವನ್ನು ಒದಗಿಸುವುದು.
2) ದುರ್ಬಲ ವರ್ಗದವರಿಗೆ ಅವಶ್ಯಕ ಬಟ್ಟೆಗಳನ್ನು ರಿಯಾಯಿತಿ ದರದಲ್ಲಿ ಪೂರೈಸುವುದು.

ಈ ಯೋಜನೆಯಡಿ ಸಹಾಯಧನವನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಲಾಗುತ್ತಿದ್ದು, ನಿಗಮವು ಸೀರೆ, ಪಂಚೆಗಳನ್ನು ಉತ್ಪಾದಿಸಿ ಗ್ರಾಮೀಣ ಹಾಗೂ ನಗರ ಪ್ರದೇಶದ ದುರ್ಬಲ ವರ್ಗದವರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಿಸುತ್ತಿದೆ.

### 6) ವಸತಿ ಕಾರ್ಯಾಗಾರ ಯೋಜನೆ :

ಸರ್ಕಾರದ ಆದೇಶ ಸಂಖ್ಯೆ: ವಾಕೈ 56 ಜಕೈಯೋ 2011 ದಿನಾಂಕ 15–05–2012 ರಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳ ವಸತಿ ಕಾರ್ಯಾಗಾರ ನಿರ್ಮಾಣಕ್ಕೆ ಘಟಕ ವೆಚ್ಚವನ್ನು ಪ್ರತಿ ಮನೆಗೆ ರೂ.1,00,000ಕ್ಕೆ ಹೆಚ್ಚಿಸಲಾಗಿದ್ದು, ಇದರಲ್ಲಿ ಶೇ.90 ರಷ್ಟು ಸಹಾಯಧನ ಮತ್ತು ಶೇ.10ರಷ್ಟು ಫಲಾನುಭವಿ ವಂತಿಗೆ ಅಥವಾ ಸಾಲದ ರೂಪದಲ್ಲಿ ಭರಿಸಲು ಆದೇಶಿಸಲಾಗಿದೆ.

ಸರ್ಕಾರದ ಪರಿಷ್ಕೃತ ಆದೇಶ ಸಂಖ್ಯೆ:ವಾಕೈ 40 ಜಕೈಯೋ 2012 ದಿನಾಂಕ 7–11–2012ರಂತೆ ಸಾಮಾನ್ಯ ವರ್ಗದ ನೇಕಾರರ ವಸತಿ ಕಾರ್ಯಾಗಾರ ಯೋಜನೆಯ ಸಹಾಯಧನ ರೂ.75,000/–, ಸಾಲ ರೂ.20000/– ಮತ್ತು ಫಲಾನುಭವಿಯ ವಂತಿಗೆ ರೂ.5,000/– ಸೇರಿ ಪ್ರತಿ ಮನೆಗೆ ಒಟ್ಟು ಘಟಕದ ವೆಚ್ಚ ರೂ.1,00,000/– ದಂತೆ ಪರಿಷ್ಕರಿಸಲಾಗಿದೆ.

### 7) ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ :

ಈ ಯೋಜನೆಯಡಿ ಕೈಮಗ್ಗ ವಲಯದ ಅಭಿವೃದ್ಧಿಗಾಗಿ ಕೈಮಗ್ಗ ಸಹಕಾರ ಸಂಘಗಳ ಮತ್ತು ನೇಕಾರರ ಆರ್ಥಿಕ ಮತ್ತು ಭೌತಿಕ ಉನ್ನತೀಕರಣಕ್ಕಾಗಿ ಸಹಾಯ ಒದಗಿಸಲಾಗುತ್ತಿದೆ. ಸದರಿ ಸಾಲಿನಲ್ಲಿ ಈ ಕೆಳಕಂಡ ಉಪಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

| ಕ್ರ. ಸಂ. | ಉಪಯೋಜನೆಗಳು |
|---|---|
| 1 | ನೇಕಾರರ ಕಲ್ಯಾಣ ಯೋಜನೆ |
| 2 | ಕೈಮಗ್ಗ ನೇಕಾರರಿಗೆ ತರಬೇತಿ(ಸ್ಟೈಫಂಡ್ ) |
| 3 | ಬಡ್ಡಿ ಸಹಾಯಧನ |
| 4 | ಹೊಸ ವಿನ್ಯಾಸ ಮತ್ತು ಪ್ರವೃತ್ತಿ (ಪ್ರವಾಸ) |
| 5 | ರಾಜ್ಯ ಮಟ್ಟದ ವಸ್ತು ಪ್ರದರ್ಶನ |
| | **ಒಟ್ಟು** |

**ಬಿ ನಬಾರ್ಡ್ ಪುನರ್ಧನ ಯೋಜನೆಯಡಿ ದುಡಿಮೆ ಬಂಡವಾಳ ಸಾಲ ಪಡೆದ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಬಡ್ಡಿ ಸಹಾಯಧನ :**

ರಾಜ್ಯದ ಕೈಮಗ್ಗ ನೇಕಾರ ಸಹಕಾರ ಸಂಘಗಳು ನಬಾರ್ಡ್ ಪುನರ್ಧನ ಯೋಜನೆಯಡಿ ಡಿ.ಸಿ.ಸಿ. ಬ್ಯಾಂಕುಗಳ ಮೂಲಕ ಪಡೆದ ದುಡಿಮೆ ಬಂಡವಾಳ ಸಾಲದ ಮೇಲೆ ಶೇಕಡ 7 ಕ್ಕಿಂತ ಹೆಚ್ಚಿನ ಬಡ್ಡಿ (ಗರಿಷ್ಠ ಶೇಕಡ 3 ರ ಮಿತಿಗೊಳಪಟ್ಟು) ಬಡ್ಡಿ ಸಹಾಯಧನವನ್ನು ಸಾಲ ನೀಡಿರುವ ಹಣಕಾಸು ಸಂಸ್ಥೆಗಳಿಗೆ ನೀಡಲಾಗುವುದು.

**(ಅ) ನೇಕಾರರ ಕಲ್ಯಾಣ ಯೋಜನೆ :**

ಈ ಯೋಜನೆಯಡಿ ನೇಕಾರರು ಮತ್ತು ಅವರ ಮಕ್ಕಳಿಗೆ ವಿವಿಧ ಘಟಕಗಳಡಿ ಈ ಕೆಳಕಂಡ ಸಹಾಯವನ್ನು ನೀಡಲಾಗುವ್ವದು.

**(1) ಆರೋಗ್ಯ ಯೋಜನೆ :**

(ಅ)ನೇಕಾರರ ಅಥವಾ ಕುಟುಂಬದ ಸದಸ್ಯರು ಕ್ಯಾನ್ಸರ್ ರೋಗದ ಚಿಕಿತ್ಸೆಗಾಗಿ ಗರಿಷ್ಠ ರೂ.50,000/–ಮತ್ತು ಚಿಕಿತ್ಸಾ ಅವಧಿಯಲ್ಲಿ ವಾರ್ಷಿಕ ರೂ.500/– ನ್ನು ನೀಡಲಾಗುವುದು.

(ಆ)ಹೃದಯ ಅಥವಾ ಕಿಡ್ನಿ ಚಿಕಿತ್ಸೆಗಾಗಿ ಗರಿಷ್ಠ ರೂ.50,000/– ಮತ್ತು ಚಿಕಿತ್ಸಾ ಅವಧಿಯಲ್ಲಿ ಪ್ರತಿ ವರ್ಷಕ್ಕೆ ರೂ.500/– ನ್ನು ನೀಡಲಾಗುವುದು.

(ಇ)ಬುದ್ಧಿ ಭ್ರಮಣೆ ಮತ್ತು ಕುಷ್ಟ ರೋಗಿಗಳ ಶುಶ್ರೂಷೆಗಾಗಿ ವಾರ್ಷಿಕ ರೂ.500/– ನೀಡಲಾಗುವುದು.

(ಈ)ನೇಕಾರರ ಅಂತ್ಯ ಸಂಸ್ಕಾರಕ್ಕಾಗಿ ಮೃತ ನೇಕಾರರ ಕುಟುಂಬದವರಿಗೆ ರೂ.1000/– ನೀಡಲಾಗುವುದು.

**(2) ಶಿಕ್ಷಣ ಯೋಜನೆ :**

ನೇಕಾರರ ಮಕ್ಕಳ ಎಸ್.ಎಸ್.ಎಲ್.ಸಿ. ನಂತರದ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನವನ್ನು ಈ ಕೆಳಕಂಡಂತೆ ನೀಡಲಾಗುವುದು.

(ರೂ. ಗಳಲ್ಲಿ)

| ಕ್ರ. ಸಂ | ಶಿಕ್ಷಣ | ವಾರ್ಷಿಕ ಶಿಷ್ಯವೇತನ | ಪುಸ್ತಕ ಖರೀದಿಗಾಗಿ | ಶೇಕಡ 70 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹೆಚ್ಚಿನ ಶಿಷ್ಯ ವೇತನ |
|---|---|---|---|---|
| 1 | ಪದವಿಪೂರ್ವ ಮತ್ತು ಡಿಪ್ಲೊಮೊ ಕೋರ್ಸ್‌ಗಳು | 500 | 250 | 500 |
| 2 | ಐ.ಟಿ.ಐ. | – | 250 | – |
| 3 | ವಿಜ್ಞಾನ ಪದವಿ | 750 | 750 | 1000 |
| 4 | ಇತರೆ ಪದವಿ ಕೋರ್ಸ್‌ಗಳು(ಕಲೆ / ವಾಣಿಜ್ಯ) | 500 | 500 | 400 |
| 5 | ವೃತ್ತಿಪರ ಕೋರ್ಸ್‌ಗಳು | 2000 | 1500 | 1500 |

(ಇ) **ಹೊಸವಿನ್ಯಾಸ ಮತ್ತು ಪ್ರವೃತ್ತಿ :**

ಮಾರುಕಟ್ಟೆ ಬದಲಾವಣೆಗಳಿಗನುಸಾರವಾಗಿ ಹೊಸ ಮಾದರಿಯ ವಿನ್ಯಾಸಗಳ ಬಗ್ಗೆ ಅರಿವನ್ನು ಮೂಡಿಸಲು ಮತ್ತು ಅವುಗಳನ್ನು ಅಳವಡಿಸಿಕೊಳ್ಳಲು ಸಹಕಾರ ಸಂಘಗಳ ನೇಕಾರರಿಗೆ ಹೊರರಾಜ್ಯ ಪ್ರವಾಸ ಮತ್ತು ನೇಕಾರ ಸೇವಾ ಕೇಂದ್ರಗಳು, ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ, ವಾರಣಾಸಿ ಮತ್ತು ವೆಂಕಟಗಿರಿ ಇಲ್ಲಿ ತರಬೇತಿಗೆ ಸಹಾಯ ನೀಡಲಾಗುವುದು. ತರಬೇತುದಾರರಿಗೆ ಗೌರವಧನ, ವಸತಿಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ನೀಡಲಾಗುವುದು.

(ಈ) **ಕೈಮಗ್ಗ ನೇಕಾರರಿಗೆ ತರಬೇತಿ :**

ನೇಕಾರರು ಉನ್ನತಮಟ್ಟದ ಕೈಮಗ್ಗ ತಂತ್ರಜ್ಞಾನದ ಅರಿವು ಪಡೆದು ಅಳವಡಿಸಿಕೊಳ್ಳಲು ಸಹಾಯ ಒದಗಿಸಲಾಗುವುದು. ರಾಜ್ಯದ ಆಯ್ದ 18 ಅಭ್ಯರ್ಥಿಗಳಿಗೆ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ ಮತ್ತು 3 ಅಭ್ಯರ್ಥಿಗಳಿಗೆ ವೆಂಕಟಗಿರಿ ಈ ಸಂಸ್ಥೆಗಳಲ್ಲಿ ಮೂರು ವರ್ಷದ ಅವಧಿಯ ತರಬೇತಿ ಪಡೆಯಲು ನಿಯೋಜಿಸಲಾಗುವುದು. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಶಿಷ್ಯವೇತನ, ಪುಸ್ತಕಗಳ ಖರೀದಿ ವೆಚ್ಚ ಹಾಗೂ ಪ್ರಾಜೆಕ್ಟ್ ಭತ್ಯೆ ನೀಡಲಾಗುವುದು.

## 8) ನೇಕಾರರ ವಿಶೇಷ ಪ್ಯಾಕೇಜ್ :

ಈ ಯೋಜನೆಯ ಉಪ ಯೋಜನೆಗಳನ್ನು ಈ ಕೆಳಗೆ ನಮೂದಿಸಿದೆ.

| | **ನೇಕಾರರ ವಿಶೇಷ ಪ್ಯಾಕೇಜ್–ಇತರೆ ವೆಚ್ಚ** |
|---|---|
| | **ಅ) ಮುಂದುವರಿದ ಕಾಂಪೋನೆಂಟ್‌ಗಳು** |
| 1 | ವಿದ್ಯುತ್ ಸಬ್ಸಿಡಿ |
| 2 | ನೇಕಾರರ ಕಾಲೋನಿಗಳಿಗೆ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಎಕ್ಸ್‌ಪ್ರೆಸ್ ಫೀಡರ್ |
| 3 | ಮಿನಿ ಪವರ್‌ಲೂಮ್ ಪಾರ್ಕ್ |
| 4 | ವಿದ್ಯುತ್‌ಮಗ್ಗ ಒದಗಿಸುವುದು |
| 5 | ಮೆಗಾ ಕ್ಲಸ್ಟರ್ ಅಭಿವೃದ್ಧಿ (ಕೇಂದ್ರವಲಯ)(ವೈ.ಎನ್.ಹೊಸಕೋಟೆ) |
| 6 | ಕೆಹೆಚ್‌ಟಿಐ, ಗದಗ & ಎಹೆಚ್‌ಟಿಐ, ಜಮಖಂಡಿ ಸಂಸ್ಥೆಗಳಿಗೆ ಆವರ್ತನ ವೆಚ್ಚ |
| 7 | ಪಟ್ಟಣ ಸಹಕಾರಿ ಬ್ಯಾಂಕ್‌ಗಳು ನೀಡಿದ 3 % ಸಾಲದ ಮೇಲೆ ಬಡ್ಡಿ ಸಹಾಯಧನ |
| 8 | ತ್ರಿಫ್ಟ್ ಫಂಡ್ ಮೇಲಿನ ಬಡ್ಡಿ |
| 9 | ಕೆಹೆಚ್‌ಟಿಐ ಗದಗ ಸಂಸ್ಥೆಗೆ ಮೂಲಭೂತಸೌಲಭ್ಯ ಅಭಿವೃದ್ಧಿಗಾಗಿ |
| 10 | ಕಚ್ಚಾ ಮಾಲು ಖರೀದಿಗಾಗಿ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ |
| 11 | ರಾಷ್ಟ್ರೀಯ ಕೈಮಗ್ಗ ಮೇಳ |
| 12 | ಕ್ರೆಡಿಟ್ ಕಾರ್ಡ್ ಕ್ಯಾಂಪ್ |
| 13 | ಸಾಮಾನ್ಯ ಸೌಲಭ್ಯ ಕೇಂದ್ರ |
| 14 | ನೇಕಾರರ ಪತ್ತಿನ ಸಹಕಾರ ಸಂಘಗಳಿಗೆ ಶೇರು ಬಂಡವಾಳ |
| 15 | ರಫ್ತು ಯೋಗ್ಯ ಕೈಮಗ್ಗ ಉತ್ಪನ್ನಗಳ ಉತ್ಪಾದನೆಗೆ ಸಹಾಯ |
| 16 | ಯಾರ್ನ್ ಡಿಪೋ ಸ್ಥಾಪನೆ |
| 17 | ಸೈಜಿಂಗ್ ಘಟಕಗಳ ಸ್ಥಾಪನೆಗೆ ಸಹಾಯಧನ |
| 18 | ಉಣ್ಣೆ ವಲಯಕ್ಕೆ ಕೌಶಲ್ಯಾಭಿವೃದ್ಧಿ ಕೇಂದ್ರ (ಕಮದೋಡ) |
| 19 | ಉಣ್ಣೆವಲಯ ಪುನಶ್ಚೇತನ |

| | **ಆ) ಹೊಸ ಕಾಂಪೊನೆಂಟ್‌ಗಳು** |
|---|---|
| 1 | ಕೈಮಗ್ಗ ವಿಕಾಸ ಯೋಜನೆ |
| 2 | ಕ್ರೆಡಿಟ್ ಕಾರ್ಡ್ ಸಾಲದ ಮೇಲೆ ಬಡ್ಡಿ ಸಹಾಯಧನ |
| 3 | ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ಗಣತಿ |
| 4 | ಎಲೆಕ್ಟ್ರಾನಿಕ್ ಜರ್ಕಾಡ್ ಅಳವಡಿಕೆಗೆ ಸಹಾಯಧನ |
| 5 | ನಾಟಿಂಗ್ ಮಿಷಿನ್ ಅಳವಡಿಕೆಗೆ ಸಹಾಯಧನ |
| 6 | ಕಾವೇರಿ ಹ್ಯಾಂಡ್‌ಲೂಮ್ಸ್ ಸಂಸ್ಥೆಗೆ ಸಹಾಯಧನ |
| 7 | ಕೆಎಸ್‌ಟಿಐಡಿಸಿಗೆ ವಿದ್ಯುತ್‌ಮಗ್ಗ ಮೂಲಸೌಲಭ್ಯಗಳ ಅಭಿವೃದ್ಧಿಗಾಗಿ |

## ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ :

ಸರ್ಕಾರದ ಉನ್ನತ ಮಟ್ಟದ ಸಮಿತಿಯು ಅನುಮೋದಿಸಿರುವ ಕ್ರಿಯಾ ಯೋಜನೆಯಂತೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುವುದು. ಕಾಂಪೊನೆಂಟ್‌ವಾರು ಆಯವ್ಯಯ ಈ ಕೆಳಗಿನಂತಿದೆ.

| ಕ್ರ.ಸಂ. | ಉಪಯೋಜನೆಗಳು |
|---|---|
| 1 | ಕೈಮಗ್ಗ ಮತ್ತು ಸಲಕರಣೆ |
| 2 | ಸಾಧಾರಣ ವಿದ್ಯುತ್‌ಮಗ್ಗ |
| 3 | ಸೆಮಿ ಆಟೋಮ್ಯಾಟಿಕ್ ವಿದ್ಯುತ್‌ಮಗ್ಗ |
| 4 | ದುಡಿಮೆ ಬಂಡವಾಳ – ಕೈಮಗ್ಗ |
| 5 | ದುಡಿಮೆ ಬಂಡವಾಳ – ವಿದ್ಯುತ್‌ಮಗ್ಗ |
| 6 | ಕಾರ್ಯಾಗಾರ |
| 7 | ಹೊಸ ಸದಸ್ಯರ ಶೇರು |
| 8 | ಮಗ್ಗ ಪೂರ್ವ ಸೌಲಭ್ಯ |
| 9 | ಸಾಮೂಹಿಕ ಸೌಲಭ್ಯ ಕೇಂದ್ರ |
| 10 | ಸಂಚಾರಿ ಮಾರುಕಟ್ಟೆ ವಾಹನ |
| 11 | ಎಲೆಕ್ಟ್ರಾನಿಕ್ ಜಕಾರ್ಡ್ |
| 12 | ನಾಟಿಂಗ್ ಮೆಷಿನ್ |
| 13 | ಮಿನಿ ಪವರ್‌ಲೂಮ್ ಪಾರ್ಕ್ |

## 9) ಕೈಮಗ್ಗ ಉತ್ಪನ್ನಗಳ ಮಾರಾಟ (20% ರಿಬೇಟ್ )– ಸಹಕಾರ ಸಂಘಗಳು :

ಈ ಯೋಜನೆಯಡಿ ರಾಜ್ಯದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಮತ್ತು ರಾಜ್ಯ ಮಟ್ಟದ ಕೈಮಗ್ಗ ಸಹಕಾರ ಮಹಾ ಮಂಡಳಗಳು ವಾರ್ಷಿಕ ನಿಗದಿಪಡಿಸಿದ 180 ದಿನಗಳಲ್ಲಿ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೇಲೆ 20% ರಿಬೇಟ್‌ನ್ನು ರಾಜ್ಯ ಸರ್ಕಾರದ ವತಿಯಿಂದ ಮರುಪಾವತಿಸಲಾಗುವುದು.

**10) ಸಿದ್ದ ಉಡುಪು ನೀತಿ ಜಾರಿಗೊಳಿಸುವುದು:**

ಈ ಯೋಜನೆಯ ಉಪಯೋಜನೆಗಳು ಈ ಕೆಳಗಿನಂತಿವೆ.

| ಕ್ರ. ಸಂ | ಉಪ ಯೋಜನೆಗಳು |
|---|---|
| 1 | ತರಬೇತಿ |
| 2 | ಗ್ರೀನ್‌ಫೀಲ್ಡ್ ಟೆಕ್ಸ್‌ಟೈಲ್ ಪಾರ್ಕ್ |
| 3 | ಮೆಗಾ ಪ್ರಾಜೆಕ್ಟ್ |
| 4 | ಉತ್ತೇಜನಗಳು ಮತ್ತು ರಿಯಾಯಿತಿಗಳು |
| 5 | ಯೋಜನಾ ನಿರ್ವಹಣಾ ವೆಚ್ಚ |

**11) ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಶೇರು ಬಂಡವಾಳ ನೆರವು :**

ಈ ಯೋಜನೆಯಡಿ ವಿದ್ಯುತ್‌ಮಗ್ಗ ನೇಕಾರರು ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ಆ ಮೂಲಕ ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲು ನೇಕಾರರಿಗೆ ನೆರವಾಗುವಂತೆ ಸಹಕಾರ ಸಂಘಗಳಿಗೆ ಶೇರು ಬಂಡವಾಳವನ್ನು ಒದಗಿಸಲಾಗುವುದು. ಈ ಸಂಘಗಳಿಗೆ ಆರ್ಥಿಕ ಸಂಸ್ಥೆಗಳ ಮೂಲಕ ದುಡಿಯುವ ಬಂಡವಾಳವನ್ನು ಪಡೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ಶೇರು ಬಂಡವಾಳವನ್ನು ನೀಡಲಾಗುವುದು.

––––